ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

ವಿನಾಯಕ ಸಿಎನ್ಸಿ ಸೆಂಟರ್ ಪ್ರೈವೇಟ್ ಅಮಿಟೆಡ್ -ವಿರುದ್ಧ-ರುದ್ರೇಶ ಡಿ.ಪಿ.

ರಿಟ್ ಅರ್ಜಿಸಂಖ್ಯೆ: 51714/2019 (ಎಲ್-ಆರ್ಇಎಸ್), ದಿನಾಂಕ 7 ನೇ ಫೆಬ್ರುವರಿ, 2020

ಅರ್ಜಿದಾರರು, ಹೆಚ್ಚುವರಿ ದಸ್ತಾವೇಜುಗಳನ್ನು ಹಾಜರುಪಡಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆಯ XVIII ನೇ ಕ್ರಮಾದೇಶದ 1- ಎ ( 3) ನೇ ನಿಯಮದ ಅಡಿಯಲ್ಲಿ ಸಲ್ಲಿಸಿದ ಆರ್.ಡಬ್ಲ್ಯು -2 ಮತ್ತು 16 ನೇ ಮಧ್ಯಂತರ ಅರ್ಜಿಯನ್ನು ಹಿಂಪಡೆಯಲು ಕೋರಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ 151 ನೇ ಪ್ರಕರಣದೊಂದಿಗೆ ಓದಲಾಗುವ XVII ನೇ ಕ್ರಮಾದೇಶದ 17 ನೇ ನಿಯಮದ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಸಂಖ್ಯೆ: 15 ನ್ನು ವಜಾಗೊಳಿಸಿ, ತುಮಕೂರಿನ ಪ್ರಧಾನ ಜಿಲ್ಲಾ ನ್ಯಾಯಾಧೀಶರು, ಮೊಕದ್ದಮೆಸಂಖ್ಯೆ: (ಕೈಗಾರಿಕಾ ವಿವಾದಗಳ ಅಧಿನಿಯಮದ 10 ನೇ ಪ್ರಕರಣ) 4/2016 ರಲ್ಲಿ ಹೊರಡಿಸಿದದಿನಾಂಕ: 16.11.2019 ರ ಆದೇಶವನ್ನು ಪ್ರಶ್ನಿಸಿದ್ದಾರೆ.

2. ಅರ್ಜಿದಾರರು, ಕಂಪನಿಗಳ ಅಧಿನಿಯಮ, 1956 ರ ಉಪಬಂಧಗಳ ಅಡಿಯಲ್ಲಿ ನೋಂದಾಯಿತ ಕಂಪನಿಯಾಗಿದೆ.ಪ್ರತ್ಯರ್ಜಿದಾರು, ಅರ್ಜಿದಾರ ಕಂಪನಿಯಲ್ಲಿ ಸಿಎನ್ ಆಪರೇಟರ್ ಆಗಿ ನೇಮಕವಾಗಿದ್ದರು.ಪ್ರತ್ಯರ್ಜಿದಾರನ ಮೇಲೆ ಹೊರಿಸಿದ ದುರ್ನಡತೆಯ ಕೆಲವು ಆರೋಪಗಳು ಸಾಬೀತಾಗಿವೆ ಎಂಬ ಕಾರಣದ ಮೇಲೆ, ಅರ್ಜಿದಾರ- ಕ ಂ ಪನಿಯುದಿನಾಂಕ: 30.09.2014 ರ ವಜಾ ಆದೇಶದ ಮೂಲಕ ಪ್ರತ್ಯರ್ಜಿದಾರನನ್ನು ಸೇವೆಯಿಂದ ಬಿಡುಗಡೆ ಮಾಡಿತ್ತು.ವಜಾ ಆದೇಶದಿಂದ ಬಾಧಿತನಾದ ಪ್ರತ್ಯರ್ಜಿದಾರನು, ಕೈಗಾರಿಕಾ ವಿವಾದಗಳ ಅಧಿನಿಯಮ, 1947 ರ 2 ಎ ಪ್ರಕರಣದೊಂದಿಗೆ ಓದಲಾಗುವ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 1988 ರ 10 ( 4-ಎ) ಪ್ರಕರಣದ ಅಡಿಯಲ್ಲಿ ಕೈಗಾರಿಕಾ ವಿವಾದವನ್ನು ಎತ್ತಿದನು.ಆ ತರುವಾಯ, ವಜಾ ಆದೇಶವನ್ನು ರದ್ದುಗೊಳಿಸುವಂತೆ ಮತ್ತು ತತ್ಪರಿಣಾಮದ ಸೇವಾ ಮುಂದುವರಿಕೆಯನ್ನು ಒಳಗೊಂಡು ಸಂಪೂರ್ಣ ಹಿಂದಿನ ವೇತನ ಮತ್ತು ಎಲ್ಲ ಇತರ ಪ್ರಾಸಂಗಿಕ ಪ್ರಯೋಜನಗಳೊಂದಿಗೆ ಹುದ್ದೆಯ ಪುನಃಸ್ಥಾಪನೆಗೆ ಕೋರಿ ಪ್ರತ್ಯರ್ಜಿದಾರನು ಕಾರ್ಮಿಕ ನ್ಯಾಯಾಲಯದ ಮುಂದೆ ಕೇಮು ಹೇಳಿಕೆಯನ್ನು ಸಲ್ಲಿಸಿದನು.ಅರ್ಜಿದಾರರು ನ್ಯಾಯಾಲಯಕ್ಕೆ ಹಾಜರಾಗಿ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿದರು.

3. ಸದರಿ ವ್ಯವಹರಣೆಗಳಲ್ಲಿ, ಕಾರ್ಮಿಕ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

1. I ನೇ ಪಕ್ಷಕಾರನ ವಿರುದ್ಧ ನಡೆಸಿದ ವಿಚಾರಣೆಯು ನ್ಯಾಯಯುತವಾಗಿದೆ ಮತ್ತು ಸೂಕ್ತವಾಗಿದೆ ಎಂಬುದನ್ನು II ನೇ ಪಕ್ಷಕಾರರು ರುಜುವಾತುಪಡಿಸಿದ್ದಾರೆಯೇ?

2. [ನೇ ಪಕ್ಷಕಾರನ ವಜಾ ಆದೇಶವು ಕಾನೂನಿಗನುಗುಣವಾಗಿದೆ ಎಂದು II ನೇ ಪಕ್ಷಕಾರರು ಸಾಬೀತುಪಡಿಸಿರುವರೇ?

3. ಆದೇಶ ಏನು?

4. 9 ನೇ ಕಂಡಿಕೆಯಲ್ಲಿರುವ ರಿಟ್ ಅರ್ಜಿಯ ಜ್ಞಾಪನಪತ್ರದಲ್ಲಿ, ಅರ್ಜಿದಾರನು, ಮುಖ್ಯ ವಿವಾದಾಂಶಗಳನ್ನು ಕುರಿತಂತೆ (ವಿವಾದಸಂಖ್ಯೆ: 1 ಮತ್ತು 3),ದಿನಾಂಕ: 01.03.2019 ರಂದು ಅರ್ಜಿದಾರರ ಸಾಕ್ಷಿದಾರ-ಆರ್ಡಬ್ಲ್ಯುನ್ನು ಮುಖ್ಯ ಸಾಕ್ಷಿದಾರನನ್ನಾಗಿ ವಿಚಾರಣೆ ಮಾಡಲಾಗಿದ್ದು,

ನಿಶಾನೆ-ಆರ್ .35 ರಿಂದ ಆರ್ .40 ರವರೆಗಿನ ದಸ್ತಾವೇಜುಗಳನ್ನು ಪುರಾವೆಯಾಗಿ ಗುರುತಿಸಲಾಗಿದೆ.ತರುವಾಯದಲ್ಲಿ,ದಿನಾಂಕ: 21.03.2019 ರಂದು ಆರ್ಡಬ್ಲ್ಯೂ -2 ನ್ನು ಪಾಟಿ-ಸವಾಲು ಮಾಡಿ, ಪ್ರತ್ಯರ್ಜಿದಾರರು/ಪ್ರಥಮ ಪಕ್ಷಕಾರರು ಅಂತಿಮ ವಾದಗಳಿಗಾಗಿದಿನಾಂಕ: 05.04.2019 ರಂದು ವಿಷಯವನ್ನು ಮುಂದೂಡಿದ್ದರು ಎಂದು ವಿವರಿಸಿದ್ದಾರೆ.

5. 10 ನೇ ಕಂಡಿಕೆಯಲ್ಲಿ, ಅಂತಿಮ ವಾದ-ಪ್ರತಿವಾದಗಳನ್ನು ಮಂಡಿಸುವ ಸಮಯದಲ್ಲಿ, ಪ್ರತ್ಯರ್ಜಿದಾರನ/ಮೊದಲ ಪಕ್ಷಕಾರನ ಪರ ನ್ಯಾಯವಾದಿಗಳು, ಅರ್ಜಿದಾರ-ಕಂಪನಿಯ ತುಮಕೂರು ಘಟಕವನ್ನು ಖಾಯಂ ಆಗಿ ಮುಚ್ಚಲಾಗಿತ್ತು ಎಂದು ಗೊತ್ತಿದ್ದೆ ಅರ್ಜಿದಾರರ ಬೆಂಗಳೂರು ಘಟಕದಲ್ಲಿ ಪ್ರತ್ಯರ್ಜಿದಾರನ ನಿಯೋಜನೆ ಮತ್ತು ಹುದ್ದೆಯ ಪುನಃಸ್ಥಾಪನೆಗೆ ಕೋರಿದ್ದರು ಎಂದು ವಿವರಿಸಲಾಗಿದೆ.ಮುಂದುವರಿದು, ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು, ತುಮಕೂರು ಘಟಕದಿಂದ ಕೆಲಸದಿಂದ ತೆಗೆದುಹಾಕಿದಂಥ ನೌಕರರಿಗೆ ಅರ್ಜಿದಾರರ ಬೆಂಗಳೂರು ಘಟಕದಲ್ಲಿ ಪರಾಯ ಉದ್ಯೋಗವನ್ನು ಕಲ್ಪಿಸಲಾಗಿತ್ತು ಎಂಬ ವಾದಗಳನ್ನು ಮೀರಿ ಆಧಾರರಹಿತ ಆಪಾದನೆಗಳನ್ನು ಸಹ ಮಾಡಿದ್ದಾರೆ.

6. 11 ನೇ ಕಂಡಿಕೆಯಲ್ಲಿ, ಪ್ರತ್ಯರ್ಜಿದಾರನ ಸದರಿ ಆಪಾದನೆಗಳನ್ನು ವಿರೋಧಿಸುವ ಸಲುವಾಗಿ ಮತ್ತು ಪ್ರತ್ಯರ್ಜಿದಾರರ ಪರ ಎತ್ತಲಾದ ಸದರಿ ವಾದವು ಆಧಾರರಹಿತ ಮತ್ತು ದಾರಿತಪ್ಪಿಸುವುದಾಗಿದೆ ಎಂಬುದನ್ನು ತೋರಿಸಲು, ಅರ್ಜಿದಾರರು ಎರಡನೇ ಪಕ್ಷಕಾರನ/ಅರ್ಜಿದಾರನ ಸಾಕ್ಷ್ಯದ ಹಂತವನ್ನು ಪುನರಾರಂಭಿಸಲು, ಆರ್ಡಬ್ಲ್ಯೂ .2 ನ್ನು ಮರುಕರೆಸುವಂತೆ ಮತ್ತು ಹೆಚ್ಚುವರಿ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಕೋರಿ ಅರ್ಜಿಗಳನ್ನು (ಮಧ್ಯಂತರ ಅರ್ಜಿ ಸಂಖ್ಯೆ 12 ರಿಂದ 14) ಸಲ್ಲಿಸಿದ್ದರು.

7. ಅಂಥ ಅರ್ಜಿಗಳನ್ನು, ಎಂದರೆ ಅರ್ಜಿದಾರರು ಸಲ್ಲಿಸಿದ್ದ 12 ರಿಂದ 14 ರವರೆಗಿನ ಮಧ್ಯಂತರ ಅರ್ಜಿಗಳನ್ನು ವಾಸ್ತವವಾಗಿ ಪುರಸ್ಕರಿಸಿ, ತನ್ನ ಸಾಕ್ಷಿದಾರರನ್ನು ಮರುಕರೆಯಲು ಮತ್ತು ಸಾಕ್ಷ್ಯಗಳನ್ನು ಮಂಡಿಸಲು ಅರ್ಜಿದಾರ-ಕಂಪನಿಗೆ ಅವಕಾಶ ನೀಡಲಾಗಿತ್ತು ಎಂಬುದನ್ನು ಗಮನಿಸುವುದು ಅಗತ್ಯ.ತದನುಸಾರವಾಗಿ, ಆರ್ಡಬ್ಲ್ಯೂ -2 ನ್ನು ಮರು ಕರೆಯಲಾಗಿತ್ತು ಮತ್ತು ಎರಡು ಹೆಚ್ಚುವರಿ ದಸ್ತಾವೇಜುಗಳನ್ನು ಹಾಜರುಪಡಿಸಿ, ಅವುಗಳನ್ನು ಗುರುತಿಸಲಾಗಿತ್ತು.ಈ ಸಂದರ್ಭದಲ್ಲಿ, ಅರ್ಜಿದಾರರು ಪುನಃ 15 ನೇ ಮತ್ತು 16 ನೇ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿ, ಹೆಚ್ಚುವರಿ ದಸ್ತಾವೇಜುಗಳನ್ನು ಸಹ ಹಾಜರು ಪಡಿಸಿದರು.ಹಾಜರುಪಡಿಸಬೇಕೆಂದು ಪ್ರಸ್ತಾವಿಸಿದ ದಸ್ತಾವೇಜುಗಳ ಮತ್ತು ಗುರುತಿಸಲಾದ ದಸ್ತಾವೇಜುಗಳ ಮತ್ತು ಅವುಗಳ ಸುಂಸಂಗತೆಯ ನೈಜತೆಯನ್ನು ಪರಿಗಣಿಸಿ, ಮಾನ್ಯ ಜಿಲ್ಲಾ ನ್ಯಾಯಾಧೀಶರು, ಅರ್ಜಿದಾರರು ಸಲ್ಲಿಸಿದ ಸದರಿ ಪುನರಾವರ್ತಿತ ಅರ್ಜಿಗಳು ವ್ಯವಹರಣೆಗಳನ್ನು ಲಂಬಿಸುವದಕ್ಕಷ್ಟೇ ಅಲ್ಲದೆ, ಮತ್ತೇನಕ್ಕೂ ಅಲ್ಲವೆಂದು ನಿರ್ಣಯಿಸಿ, 5,000/- ರೂ.ಗಳ ವೆಚ್ಚದೊಂದಿಗೆ ಅದನ್ನು ವಜಾಗೊಳಿಸಿದರು.ಆದ್ದರಿಂದ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

8. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಗಣಪತಿ ಹೆಗ್ಡೆಯವರು, ಭಾರತ ಒಕ್ಕೂಟ -ವಿರುದ್ಧ-ಆರ್.ಗಾಂಧಿ, ಅಧ್ಯಕ್ಷರು, ಮದ್ರಾಸ್ ವಕೀಲರ ಸಂಘ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ವಿರುದ್ಧ ಲಕ್ಷ್ಮೀದೇವಮ್ಮ (ಶ್ರೀಮತಿ) ಮತ್ತು ಇನ್ನೊಬ್ಬರು ಮೊಕದ್ದಮೆಗಳನ್ನು ಅವಲಂಬಿಸಿ, ಸಿವಿಲ್ ಪ್ರಕ್ರಿಯಾ ಸಂಹಿತೆ ಮತ್ತು ಸಾಕ್ಷ್ಯ ಎಲಾ ಅಧಿನಿಯಮದ ಉಪಬಂಧಗಳು, ಕಾರ್ಮಿಕ ನ್ಯಾಯಾಲಯ/ನ್ಯಾಯಾಧಿಕರಣದ ಮುಂದಿನ ವ್ಯವಹರಣೆಗಳಿಗೆ ಕರಾರುವಕ್ಕಾಗಿ ಅನ್ವಯವಾಗುವುದಿಲ್ಲವಾದರೂ, ಕಾನೂನು ವ್ಯವಹರಣೆಗಳಲ್ಲಿ ಸಹಜ ನ್ಯಾಯ ತತ್ತ್ವಗಳನ್ನು ಅತ್ಯಗತ್ಯವಾಗಿ ಪಾಲಿಸಬೇಕಾಗುತ್ತದೆ; 15 ನೇ ಮತ್ತು 16 ನೇ ಮಧ್ಯಂತರ ಅರ್ಜಿಗಳಿಗೆ ಪ್ರತ್ಯರ್ಜಿದಾರನು ಸಲ್ಲಿಸಿದ ಆಕ್ಷೇಪಣೆಗಳನ್ನು ವಿಚಾರಣೆ ಮಾಡಲು ಮತ್ತು ಅದರ ಮೇಲೆ ವಾದ-ಪ್ರತಿವಾದಗಳನ್ನು ಮಂಡಿಸಲು ಅರ್ಜಿದಾರನಿಗೆ ಯಾವುದೇ ಅವಕಾಶವನ್ನು ನೀಡಿರುವುದಿಲ್ಲ; ಪ್ರಶ್ನಿತ

ಆದೇಶವನ್ನು ತರಾತುರಿಯಲ್ಲಿ ಹೊರಡಿಸಲಾಗಿದೆಯಾದುದರಿಂದ, ಈ ನ್ಯಾಯಾಲಯವು ಪ್ರಶ್ನಿತ ಆದೇಶದಲ್ಲಿ ಮಧ್ಯಪ್ರವೇಶಿಸುವುದು ಅಗತ್ಯವೆಂದು ನಿವೇದಿಸಿಕೊಂಡಿದ್ದಾರೆ.

9. ಪ್ರತ್ಯರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿ ಕೊಂಡಿರುವುದೇನೆಂದರೆ, ಪ್ರತ್ಯರ್ಜಿದಾರನು ಸಲ್ಲಿಸಿರುವ 15 ನೇ ಮತ್ತು 16 ನೇ ಮಧ್ಯಂತರ ಅರ್ಜಿಗಳು, ಪ್ರತ್ಯರ್ಜಿದಾರನ ಸೇವೆಯನ್ನು ಕೊನೆಗೊಳಿಸಿದ ಆದೇಶವನ್ನು ಪ್ರಶ್ನಿಸಿ ಆತನು ಸಲ್ಲಿಸಿದ ಕ್ಲೇಮು ಹೇಳಿಕೆಯಷ್ಟರಮಟ್ಟಿಗೆ ವಿವಾದದ ನ್ಯಾಯನಿರ್ಣಯಕ್ಕೆ ಯಾವ ರೀತಿಯಲ್ಲೂ ಸಂಬಂಧಿಸಿರುವುದಿಲ್ಲ.ಮೆ:ವರ್ಕ್ಮೆನ್ ಆಫ್ ಫೈರ್ಸ್ಟೋನ್ ಟೈರ್ ಅಂಡ್ ರಬ್ಬರ್ ಕಂಪನಿ ಆಫ್ ಇಂಡಿಯ (ಪ್ರೈವೇಟ್) ಅಮಿಟೆಡ್ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನವಲಂಬಿಸಿ, ಚ ಯಾವುದೇ ವಿಚಾರಣೆಯನ್ನು ನಡೆಸದೆ ಇದ್ದರೆ ಅಥವಾ ನಿಯೋಜಕನು ವಿಚಾರಣೆಯನ್ನು ನಡೆಸಿದ ನಂತರ, ಅವನಿಗೆ ದೋಷ ಕಂಡುಬಂದರೆ ಮಾತ್ರವೇ, ಕ್ರಮ ತೆಗೆದುಕೊಂಡ ಅಧಿಕಾರವಾಪ್ತಿಯಲ್ಲಿ ಮೊದಲ ಬಾರಿಗೆ ಕಾರ್ಮಿಕ ನ್ಯಾಯಾಲಯ/ನ್ಯಾಯಾಧಿಕರಣದ ಮುಂದೆ ಮಂಡಿಸಿದ ಸಾಕ್ಷ್ಯವನ್ನು ಪರಿಗಣಿಸಲು ಅದು ಅಧಿಕಾರವ್ಯಾಪ್ತಿಯನ್ನು ಪಡೆಯುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.ಪ್ರಸ್ತುತ ವ್ಯವಹರಣೆಗಳಲ್ಲಿ, ವಿಚಾರಣೆಯ ಪ್ರಾಮಾಣಿಕತೆಗೆ ಸಂಬಂಧಿಸಿದ ವಿವಾದವನ್ನು, ಯುಕ್ತ ಮತ್ತು ಕಾನೂನುಬದ್ಧವೆಂದು ನಿರ್ಣಯಿಸಲಾಗಿದ್ದು, ಅರ್ಜಿದಾರರ ಪರವಾಗಿ ಉತ್ತರಿಸಲಾಗಿದೆ. ಇಂಥ ಸಂದರ್ಭಗಳಲ್ಲಿ, ಅರ್ಜಿದಾರರು ಮತ್ತಷ್ಟು ಸಾಕ್ಷ್ಯವನ್ನು ಒದಗಿಸುವುದು, ಹೆಚ್ಚು ನಿರ್ದಿಷ್ಟವಾಗಿ, ಸಾಕ್ಷಿದಾರರನ್ನು ಮರುಕರೆದು ವಿಷಯಗಳನ್ನು ಪುನಃ ಪ್ರಾರಂಭಿಸುವುದು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದು ನ್ಯಾಯಾಲಯ ಪ್ರಕ್ರಿಯೆಯ ದುರುಪಯೋಗವಲ್ಲದೆ ಮತ್ತೇನೂ ಅಲ್ಲ. ಮಾನ್ಯ ಜಿಲ್ಲಾ ನ್ಯಾಯಾಧೀಶರು ವಾಸ್ತವ ಅಂಶಗಳನ್ನು, ಅಷ್ಟೇ ಅಲ್ಲದೆ ಕಾನೂನಿನ ಅಂಶಗಳನ್ನು ಸರಿಯಾದ ದೃಷ್ಟಿಕೋನದಿಂದ ವಿಶ್ಲೇಷಿಸಿ, ಅರ್ಜಿಗಳನ್ನು ವಜಾಗೊಳಿಸಿದ್ದಾರೆ ಮತ್ತು ಅದನ್ನು ಈ ನ್ಯಾಯಾಲಯವು ಸ್ಥಿರೀಕರಿಸಬೇಕಾದ ಅಗತ್ಯವಿದೆ.

10. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದ-ವಿವಾದಗಳನ್ನು ನಾನು ಕೂಲಂಕಷವಾಗಿ ಪರಿಗಣಿಸಿದ್ದೇನೆ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಅವಲೋಕಿಸಿದ್ದೇನೆ.

11. ಮೇಲೆ ಹೇಳಿದ ವಾದಗಳಿಂದ ಕಂಡುಬರುವಂತೆ, ತುಮಕೂರಿನಲ್ಲಿನ ಕೈಗಾರಿಕಾ ಸಂಸ್ಥೆಯನ್ನು ಮುಚ್ಚಿದ ನಂತರ ನೇಮಕಾತಿಗಳನ್ನು ಬೆಂಗಳೂರು ಘಟಕದಲ್ಲಿನ ಅಂತಹುದೇ ಹುದ್ದೆಗಳಿಗೆ ನಿಯೋಜನೆಯನ್ನು ಮಾಡಲಾಯಿತು ಎಂದು ಕಾರ್ಮಿಕರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಖಂಡಿಸಲು ಅರ್ಜಿಗಳನ್ನು ಸಲ್ಲಿಸಲಾಗಿತ್ತು ಎಂದು ಅರ್ಜಿದಾರರು ನಿರೂಪಿಸಿದ್ದಾರೆ.12 ರಿಂದ 14 ರವರೆಗಿನ ಮಧ್ಯಂತರ ಅರ್ಜಿಗಳನ್ನು ಮೊದಲ ಹಂತದಲ್ಲಿ ದಸ್ತಾವೇಜುಗಳನ್ನು ಗುರುತಿಸಲು ಸಾಕ್ಷಿದಾರ-ಆರ್ಡಬ್ಲ್ಯು .2 ರನ್ನು ಮರುಕರೆಯಲು ಸಲ್ಲಿಸಲಾಗಿದ್ದು, ಅವುಗಳನ್ನು ಪುರಸ್ಕರಿಸಲಾಗಿದೆ ಮತ್ತು ಅರ್ಜಿದಾರರು ಅದರ ಪ್ರಯೋಜನವನ್ನು ಪಡೆದಿದ್ದಾರೆ.

12. ಅರ್ಜಿದಾರನು ಅದೇ ಸಾಕ್ಷಿದಾರರನ್ನು ಮರುಕರೆಯುವ ಮತ್ತು ದಸ್ತಾವೇಜುಗಳನ್ನು ಎಂದರೆ ( i) ಹೊಸ ನಿಯೋಜನೆಯ ಅವಕಾಶಕ್ಕಾಗಿ ಶಶಿಕಿರಣ್ ಇವರನ್ನು ಉದ್ದೇಶಿಸಿ ಬರೆದ II ನೇ ಪಕ್ಷಕಾರರದಿನಾಂಕ: 29.03.2016 ರ ಪತ್ರದ ಪ್ರಮಾಣಿತ ಪ್ರತಿ;(ii) ಹೊಸ ನಿಯೋಜನೆಯ ಅವಕಾಶಕ್ಕಾಗಿ ವೀರೇಶ್ ಎಂ. ಇವರನ್ನು ಉದ್ದೇಶಿಸಿ ಬರೆದ II ನೇ ಪಕ್ಷಕಾರರದಿನಾಂಕ: 29.03.2016 ರ ಪತ್ರದ ಪ್ರಮಾಣಿತ ಪ್ರತಿ;(iii) ಹೊಸ ನಿಯೋಜನೆಯ ಅವಕಾಶಕ್ಕಾಗಿ ಅರುಣಕುಮಾರ್ ಬಿ.ಎಸ್. ಇವರನ್ನು ಉದ್ದೇಶಿಸಿ ಬರೆದ II ನೇ ಪಕ್ಷಕಾರರದಿನಾಂಕ: 21.04.2016 ರ ಪತ್ರದ ಪ್ರಮಾಣಿತ ಪ್ರತಿಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ ಎಂಬ ಸಂಗತಿಯು ವಿಲಕ್ಷಣವಾಗಿದೆ.ಈ ದಸ್ತಾವೇಜುಗಳ ಸುಸಂಗತೆ ಏನು ಎಂಬುದನ್ನು, ಅರ್ಜಿಗಳ ಸಮರ್ಥನೆಯಲ್ಲಿ ಸಲ್ಲಿಸಿದ ಅಫಿಡಾವಿಟ್ನಲ್ಲಾಗಲಿ ಅಥವಾ ಅದನ್ನು ನ್ಯಾಯಾಲಯದ ಮುಂದೆ ಮಂಡಿಸಿದ ವಾದ-

ಪ್ರತಿವಾದಗಳಲ್ಲಾಗಲಿ ಹೇಳಿರುವುದಿಲ್ಲ.ಆದಾಗ್ಯೂ, ಈ ನ್ಯಾಯಾಲಯದ ಮುಂದಿನ ವಾದಾಂಶಗಳು, ತುಮಕೂರು ಘಟಕದಲ್ಲಿ ಕಾವ್ಯನಿರ್ವಹಿಸುತ್ತಿದ್ದ ಅದೇ ರೀತಿ ಇದ್ದ ಕಾರ್ಮಿಕರಿಗೆ ಬೆಂಗಳೂರು ಘಟಕದಲ್ಲಿ ನೌಕರಿ ಒದಗಿಸಲಾಯಿತು ಎಂದು ಕಾರ್ಮಿಕರ ಪರವಾಗಿ ಮಾಡಿದ ವಾದ-ಪ್ರತಿವಾದಗಳನ್ನು ವಿರೋಧಿಸಲು 15 ನೇ ಮತ್ತು 16 ನೇ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಲಾಗಿತ್ತು ಎಂಬುದನ್ನು ಸೂಚಿಸುತ್ತವೆ.

13. ಸೂಕ್ತ ಮತ್ತು ಕಾನೂನುಬದ್ಧವಾಗಿ ನಡೆಸಬೇಕಾದ ವಿಚಾರಣೆಯ ಸಂದರ್ಭದಲ್ಲಿ, ವ್ಯವಸ್ಥಾಪನಾ ಮಂಡಳಿಯ ವಾದವನ್ನು ಸಾಬೀತುಪಡಿಸಲು ರುಜುವಾತುಪಡಿಸಲು ಹೆಚ್ಚಿನ ಸಾಕ್ಷ್ಯವು ಕಡ್ಡಾಯವೇನಲ್ಲ ಎಂಬುದು ಸರ್ವೇಸಾಮಾನ್ಯ ಕಾನೂನು ನಿಯಮವಾಗಿದೆ.ವಿಚಾರಣಾ ಅಧಿಕಾರಿಯ ಮುಂದೆ ಮಂಡಿಸಿದ ಮುಖ್ಯ ಸಾಕ್ಷ್ಯವನ್ನು ಅವಲಂಬಿಸುವುದು ಪರಾಪ್ತವಾಗಿದೆ.ಆದಾಗ್ಯೂ, ಕಾರ್ಮಿಕನು ಮಂಡಿಸಿದ ಸಾಕ್ಷ್ಯದ ಮುಂದುವರಿಕೆಯಾಗಿ, ವ್ಯವಸ್ಥಾಪನಾ ಮಂಡಳಿಯು ಸಾಕ್ಷ್ಯವನ್ನು ಮಂಡಿಸ ಬಹುದಾಗಿದೆಯಾದರೂ, ಮಾನ್ಯ ಜಿಲ್ಲಾ ನ್ಯಾಯಾಧೀಶರು ಅಭಿಪ್ರಾಯಪಟ್ಟಿರುವಂತೆ ಸ್ವಲ್ಪ ಸ್ವಲ್ಪವೇ ಅಲ್ಲ. ಸಾಕ್ಷಿದಾರರನ್ನು ಮರುಕರೆಯುವ ಮತ್ತು ದಸ್ತಾವೇಜುಗಳನ್ನು ಗುರುತಿಸುವ ಅವಕಾಶವನ್ನು ಪಡೆಯಬಹುದು ಮತ್ತು ಅಂಥ ಅಧಿಕಾರವನ್ನು ನ್ಯಾಯಾಲಯವು, ಮಂಡಿಸಿದ ವಾದ-ವಿವಾದಗಳನ್ನಾಧರಿಸಿ ಅಥವಾ ವಾದ-ವಿವಾದಗಳ ಸಮಯದಲ್ಲಿ ಗಮನಿಸಿದ ಸಾಕ್ಷ್ಯದಲ್ಲಿನ ಕೊರತೆಗಳನ್ನು ತುಂಬಲು ಪಕ್ಷಕಾರರ ಅನುಕೂಲಕ್ಕಾಗಿ ಪದೇ ಪದೇ ಚಲಾಯಿಸಲಾಗುವುದಿಲ್ಲ.

14. ಸಿವಿಲ್ ಪಕ್ರಿಯಾ ಸಂಹಿತೆಯ XVIII ನೇ ಕ್ರಮಾದೇಶದ 17 ನೇ ನಿಯಮವು, ಪಕ್ಷಕಾರರ ಹೆಚ್ಚಿನ ವಿಚಾರಣೆಗೆ ಯಾರೇ ಸಾಕ್ಷಿದಾರರನ್ನು ಮರುಕರೆಯಲು, ಪಾಟಿ ಸವಾಲು ಮಾಡಲು ಅವರಿಗೆ ಸಾಧ್ಯಗೊಳಿಸುವುದಕ್ಕಾಗಿ ಉದ್ದೇಶಿಸಿರುವ ಉಪ ಬ ೦ ಧವಲ್ಲ.ಸಾಕ್ಷ್ಯವನ್ನು ಮರುದಾಖಲಿಸುವಾಗಲೂ ಅದನ್ನು ಮಂಡಿಸಬಹುದಾಗಿದೆ.ಸಾಕ್ಷಿದಾರರನ್ನು ಮರುಕರೆಯಲು ಸಂಹಿತೆಯ ಅಡಿಯಲ್ಲಿ ಪದ್ಯಾಲೋಚಿಸಲಾದ ಅಂಥ ಅಧಿಕಾರವನ್ನು ನಿಯತವಾಗಿ ಬಳಸಲಾಗುವುದಿಲ್ಲ.ಹಾಗೆ ಬಳಸಿದರೆ, ಅದು ಖಂಡಿತವಾಗಿಯೂ ತ್ವರಿತಗತಿಯಲ್ಲಿ ನ್ಯಾಯ ನೀಡುವ ಉದ್ದೇಶವನ್ನೇ ವಿಫಲಗೊಳಿಸುವುದು.ಅಂಥ ಅರ್ಜಿಗಳನ್ನು ಪುರಸ್ಕರಿಸಿದರೆ, ಅದು ಖಂಡಿತವಾಗಿಯೂ ವ್ಯವಹರಣೆಗಳನ್ನು ಲಂಬಿಸುವುದಕ್ಕಾಗಿದ್ದು, ವ್ಯವಹರಣೆಗಳನ್ನು ಲಂಬಿಸುವುದರಿಂದ ನ್ಯಾಯದ ವಿಫಲತೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ.

15. ಅರ್ಜಿದಾರರು, 12 ರಿಂದ 14 ರವರೆಗಿನ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿದ್ದು, ಕೆಲವು ದಸ್ತಾವೇಜುಗಳನ್ನು ಗುರುತಿಸಿದ್ದಾರೆ.ಈಗ ಗುರುತಿಸಬೇಕಾಗಿರುವ ದಸ್ತಾವೇಜುಗಳು ಅರ್ಜಿದಾರನ ಸ್ವಾಧೀನದಲ್ಲಿಯೇ ಇದ್ದವು ಮತ್ತು ಈ ದಸ್ತಾವೇಜುಗಳು 2016 ನೇ ಸಾಲಿಗೆ ಸಂಬಂಧಿಸಿದವುಗಳಾಗಿವೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ.ಆದ್ದರಿಂದ, ಅರ್ಜಿದಾರನ ಸಂಪೂರ್ಣ ಉದ್ದೇಶವು, ನ್ಯಾಯಾಲಯವು ದಾಖಲಿಸಿದ ಸಾಕ್ಷ್ಯದಲ್ಲಿನ ಕೊರತೆಗಳನ್ನು ತುಂಬುವ ಪ್ರಯತ್ನವಾಗಿದ್ದು, ಅದನ್ನು ಅವಲಂಬಿಸಿ, ಕಾರ್ಮಿಕನು ವಾದ-ಪ್ರತಿವಾದಗಳನ್ನು ಮಂಡಿಸಿದ್ದನು ಎಂಬುದು ಸ್ಪಷ್ಟವಾಗುತ್ತದೆ.

16. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ಕಾನೂನು ನಿಲುವಿನಲ್ಲಿ ಯಾವುದೇ ವಿನಾಕಾರಣ ಆಕ್ಷೇಪಣೆ ಇರುವುದಿಲ್ಲ.ಹಾಗಿದ್ದರೂ, ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿರುವ ತೀರ್ಪುಗಳು ಅರ್ಜಿದಾರರಿಗೆ ಯಾವುದೇ ನೆರವನ್ನು ಒದಗಿಸುವುದಿಲ್ಲ.

ಈ ಸಂದರ್ಭಗಳ ಮೇರೆಗೆ, ಮಾನ್ಯ ಜಿಲ್ಲಾ ನ್ಯಾಯಾಧೀಶರ ನಿರ್ಣಯದಲ್ಲಿ ತಪ್ಪಿದೆ ಎಂದು ಹೇಳಲಾಗುವುದಿಲ್ಲ.

ಮೇಲೆ ಹೇಳಿದ ಕಾರಣಗಳಿಗಾಗಿ, ರಿಟ್ ಅರ್ಜಿಯು ವಜಾಗೊಂಡಿದೆ.